**FDP No.73-2018**
**PW-1**

<u>ದಿನಾಂಕಃ **28.04.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಎದರುದಾರರ ಪರ ಶ್ರೀ ಎಸ್ ಜೆ ಕೆ ವಕೀಲರಿಂದಃ</u>

ನೀವು ಮೈನರ ಇರುವಾಗ ನಿಮ್ಮ ತಾಯಿಯವರು ನಿಮ್ಮ ಪರವಾಗಿ ಸಲ್ಲಿಸಿದ್ದ ದಾವೆಯಲ್ಲಿ ಯಡ್ಮುಯುರಿನಲ್ಲಿರುವ ಸ್ವತ್ತಿಗೆ ಶೆಡ್ಯೂಲ ಏನೆಂದು ಹಾಕಿದ್ದರು ಎಂದು ನಿಮಗೆ ಗೊತ್ತಿದೆ ಎಂದರೆ ನಾನು ಸಣ್ಣವನಿದ್ದ ಕಾರಣ ನನಗೆ ಗೊತ್ತಿಲ್ಲ. ದಾವಾ ಸಂಖ್ಯೆ ಃ8189/12 ರ ಶೆಡ್ಯೂಲನ್ನು ಸಾಕ್ಷಿಗೆ ಓದಿ ಹೇಳಲಾಗಿ ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಆ ದಾವಾ ಸ್ವತ್ತಿನ ಶೆಡ್ಯೂಲನಲ್ಲಿ ಕಟ್ಟಡ ಇರುವ ಬಗ್ಗೆ ನಮೂದಾಗಿಲ್ಲ ಎಂದರೆ ಸರಿಯಲ್ಲ. ದಾವಾ ಸಂಖ್ಯೆ ಃ8189/12 ರ ಶೆಡ್ಯೂಲ ನಲ್ಲಿ ಎಷ್ಟು ಚದುರ ಕಟ್ಟಡ ಇದೆ ಎಂಬ ಬಗ್ಗೆ ನಮೂದಾಗಿದೆ ಎಂದು ಸಾಕ್ಷಿಗೆ ದಾವಾ ಸಂಖ್ಯೆ ಃ8189/12 ರ ವಾದ ಪತ್ರದ ಶೆಡ್ಯೂಲ ತೋರಿಸಲಾಗಿ ಇಲ್ಲ ಎಂದು ಹೇಳಿರುತ್ತಾರೆ. ನೀವು ದಾವಾ ಸಂಖ್ಯೆ ಃ8189/12 ರ ವಾದ ಪತ್ರದ ಶೆಡ್ಯೂಲ ಸ್ವತ್ತಿಗೆ ಯಾವಾಗ ಹೋಗಿದ್ದೀರಿ ಎಂದರೆ ಚಿಕ್ಕ ವಯಸ್ಸಲ್ಲೂ ಹೋಗಿದ್ದೆ ಮತ್ತು ಹೋದ ತಿಂಗಳಲ್ಲಿ ಹೋಗಿದ್ದೆ. ನೀವು ಹೋದ ತಿಂಗಳಲ್ಲಿ ಹೋಗಿದ್ದಾಗ ದಾವಾ ಶೆಡ್ಯೂಲ ಸ್ವತ್ತಿನ ದಕ್ಷಿಣಕ್ಕೆ 20 ಅಡಿ ರಸ್ತೆ ಇದೆ ಎಂದರೆ ಸರಿ. ರಸ್ತೆಯಿಂದ ಕನಕಪುರ ಬೆಂಗಳೂರು ಮುಖ್ಯ ರಸ್ತೆಗೆ ಬರಲು ಎಷ್ಟು ಅಂತರ ಇದೆ ಎಂದರೆ ನನಗೆ ಗೊತ್ತಿಲ್ಲ. ಜಯನಗರಕ್ಕೂ ಮತ್ತು ನಿಮ್ಮ ಸ್ವತ್ತಿಗೂ ಎಷ್ಟು ಅಂತರ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಸ್ವತ್ತು 20 ಅಡಿ ರಸ್ತೆಯಲ್ಲಿ ನಡೆದು ಬಂದರೆ ಮಾತ್ರ ನಿಮಗೆ ಕನಕಪುರ ಮತ್ತು ಬೆಂಗಳೂರು ಮುಖ್ಯ ರಸ್ತೆ ಸಿಗುತ್ತದೆ ಎಂದರೆ ಹೌದು. ನಿಮ್ಮ ಸ್ವತ್ತಿಗೆ ಈಗ ಮಾರಾಟದ ಮೌಲ್ಯ ಒಂದು ಚದುರಡಿಗೆ ರೂ 10 ಸಾವಿರ ಎಂದು ಬರೆದಿದ್ದೀರಿ

ಅದನ್ನು ತೋರಿಸಲು ಯಾವುದಾದರು ದಾಖಲೆ ಹಾಜರು ಪಡಿಸಿದ್ದೀರಿ ಎಂದರೆ ಹೌದು. ನೀವು ಹಾಜರು ಪಡಿಸಿರುವ ದಾಖಲೆಯಲ್ಲಿ ಸರಕಾರದ ಇಲಾಖೆಯಿಂದ ನೀಡಿರುವ ಯಾವುದೆ ಸ್ವತ್ತಿಗೆ ಸಂಬಂಧಿಸಿದ ಮೌಲ್ಯ ಮಾಪನಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ಹಾಜರು ಪಡಿಸಿರುವ ದಾಖಲೆಯಲ್ಲಿ ಬನಶಂಕರಿ ಸ್ವತ್ತುಗಳ ಬಗ್ಗೆ ನಮೂದಾಗಿದೆ ಎಂದರೆ ಅಲ್ಲೆ ಜಯನಗರದಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ನೀವು ಕೊಟ್ಟಿರುವ ದಾಖಲೆ ಪ್ರಕಾರ ಅದು ದಿಃ21.02.2025 ಎಂದು ತೋರಿಸುತ್ತಿದೆ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣ ಪತ್ರದ ಪ್ಯಾರಾ 14 ರಲ್ಲಿ ಎದುರುದಾರರು ಸ್ವತ್ತಿನಲ್ಲಿರುವ ಕಟ್ಟಡದ ಎರಡು ಬೆಡರೂಮ ನ ಮನೆಗೆ ಮಾಸಿಕ ರೂ 25,000/- ಬಾಡಿಗೆ ಪಡೆದುಕೊಳ್ಳುತ್ತಿದ್ದೀರಿ ಎಂದು ಹೇಳಿದ್ದೀರಿ ಹಾಗೂ ಒಂದು ಬೆಡರೂಮಗೆ ನ ಮನೆಗೆ ಮಾಸಿಕ ರೂ 15,000/- ಬಾಡಿಗೆ ಪಡೆದುಕೊಳ್ಳುತಿದ್ದೀರಿ ಎಂದು ಹೇಳಿದ್ದೀರಿ ಅದನ್ನು ತೋರಿಸಲು ಯಾವುದಾದರು ದಾಖಲೆಯನ್ನುಹಾಜರು ಪಡಿಸಿದ್ದೀರಾ ಎಂದರೆ ಹೌದು. ಆ ಕಟ್ಟಡದಲ್ಲಿ ಯಾರು ಯಾರು ವಾಸವಾಗಿದ್ದಾರೆ ಮತ್ತು ಆ ಬಾಡಿಗೆದಾರ ಹೆಸರು ಹೇಳಲಾಗವುದೆ ಎಂದರೆ ಇಲ್ಲ. ನೀವು ಆ ರೀತಿ ಬಾಡಿಗೆ ಪಡೆದುಕೊಳ್ಳುತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ಮುಖ್ಯ ವಿಚಾರಣ ಪತ್ರದ ಪ್ಯಾರಾ 7 ರಲ್ಲಿ ಕಟ್ಟಡದ ಮಾರಾಟದ ಬೆಲೆ ರೂ 7,21,871/- ಎಂದು ಕೇಳಿದ್ದೀರಿ, ಅದನ್ನು ತೋರಿಸಲು ಯಾವುದಾದರೂ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಹೌದು. ನೀವು ಮತ್ತು ಮೌಲ್ಯಮಾಪಕರು ಹೋಗಿ ಕಟ್ಟಡವನ್ನು ಅಳತೆ ಮಾಡಿದಾಗ ನಿವೇಶನದ ವಿಸ್ತಿರ್ಣ 1260 ಅಡಿ ಬಂದಿತ್ತು ಎಂದರೆ ಆ ದಿನ ನಾನು ಇರಲಿಲ್ಲ. ನೀವು ನಿಮ್ಮ ಮುಖ್ಯ ವಿಚಾರಣ ಪತ್ರದಲ್ಲಿ ಹೇಳಿರುವ ರೂ 61,12,121/- mesne profit ಬರಬೇಕೆಂದು ಹೇಳಿರುವುದು ಸರಿಯಲ್ಲ ನಿಮಗೆ ಅಷ್ಟು

**FDP No.73-2018**
**PW-1**

ಬರೆಬೇಕಾಗಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯ ವಿಚಾರಣ ಪತ್ರದ ಪ್ಯಾರಾ 16 ರಲ್ಲಿ ಉಳಿಕೆ 265 ಚದುರಡಿ ಎಂದು ಬರೆದಿದ್ದೀರಿ ಅದರಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂದು ನಿಮಗೆ ಗೊತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನೀವು ನಿಮ್ಮ ಮುಖ್ಯ ವಿಚಾರಣ ಪತ್ರದಲ್ಲಿ ಹೇಳಿರುವ ರೂ 61,12,121/- mesne profit ಬರಬೇಕೆಂದು ಸುಳ್ಳಾಗಿ ನಿಮ್ಮ ಮುಖ್ಯ ವಿಚಾರಣಾ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೆ ದಾಖಲೆಗಳನ್ನು ಹಾಜರು ಪಡಿಸದೆ ರೂ 61,12,121/-ವನ್ನು ಕೇಳುತ್ತಿದ್ದೀರಾ ಎಂದರೆ ದಾಖಲೆಗಳನ್ನು ಕೊಟ್ಟು ಕೇಳುತ್ತಿದ್ದೇನೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**( ನಿಶಾ ರಾಣಿ ಎ ಸಿ)**
**III ನೇ ಎಸಿಸಿಜೆ, ಬೆಂಗಳೂರು.**